ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಸೋಮವಾರಪೇಟೆ
ಸಿ.ಸಿ. ನಂ.308/2025

| | | |
|---|---|---|
| ಹೆಸರು | : ವೀರೇಶ್ ಕುಮಾರ್ | ಪಿಡಬ್ಲ್ಯೂ-2 |
| ತಂದೆಯ ಹೆಸರು | : ಲೇಟ್ ಪೊನ್ನಪ್ಪ | ಸಿಡಬ್ಲ್ಯೂ-2 |
| ವಯಸ್ಸು | : 48 ವರ್ಷ | |
| ವೃತ್ತಿ | : ಅಬಕಾರಿ ಉಪನಿರೀಕ್ಷರು | |
| ವಾಸ ಸ್ಥಳ | : ಸೋಮವಾರಪೇಟೆ | |

ದಿಃ06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:

ದಿಃ 10.12.2020 ರಿಂದ 23.11.2025 ರವರೆಗೆ ತನಕ ಸೋಮವಾರಪೇಟೆ ಅಬಕಾರಿ ಕಚೇರಿಯಲ್ಲಿ ಅಬಕಾರಿ ಮುಖ್ಯ ಪೇದೆ ಆಗಿ ಕರ್ತವ್ಯ ನಿವರ್ಹಿಸಿದ್ದೆ.

ಈ ಪ್ರಕರಕ್ಕೆ ಸಂಬಂದಪಟ್ಟಂತೆ ದಿಃ 16.01.2025 ರಂದು ಅಬಕಾರಿ ವಲಯ ಕಚೇರಿಯಲ್ಲಿ ರಾತ್ರಿ ಪಾಳಿಯಲ್ಲಿದ್ದಾಗ ನನ್ನ ಜೊತೆ ಚಾಸಾ 1 ರವರು ಇದ್ದಾಗ ನನಗೆ ದೂರವಾಣಿ ಕರೆ ಮುಖಾಂತರ ದೊಡ್ಡತೊಳೂರು ಗ್ರಾಮದ ನಿವಾಸಿಯಾದ ಆನಂದ ಮಾದಪ್ಪ ಹಾಗೂ ವಿರುಪಾಕ್ಷ ಎಂಬುವವರು ಅಕ್ರಮವಾಗಿ ಕಳ್ಳಬಟ್ಟಿ ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡಿ ಗ್ರಾಮದಲ್ಲಿ ಕಲಹ ಉಂಟಾಗುತ್ತದೆ ಎಂದು ದೂರವಾಣಿ ಮುಖಾಂತರ ಕ್ರಮ ಕೈಗೊಳ್ಳುವಂತೆ ತಿಳಿಸಿರುತ್ತೇನೆ. ನಂತರ ಚಾಸಾ 1 ರವರು ಅಬಕಾರಿ ನಿರೀಕ್ಷಕರವರಿಗೆ ವಿಷಯವನ್ನು ತಿಳಿಸಿ ನಂತರ ನಾನು ಲಿಖಿತ ದೂರನ್ನು ನೀಡಿರುತ್ತೇನೆ. ನಂತರ ನಾವು 3 ತಂಡಗಳನ್ನು ರಚಿಸಿ ಸರ್ಕಾರಿ ವಾಹನ ಸಂಖೆಃ ಕೆ ಎ 12 ಜಿ 0825 ವಾಹನದಲ್ಲಿ ಹಾಗೂ ಎರಡು ದ್ವಿಚಕ್ರ ವಾಹನದಲ್ಲಿ ಆ ಗ್ರಾಮಕ್ಕೆ ತೆರಳಿ ಅಲ್ಲಿಯ ಸ್ಥಳೀಯರನ್ನು ಪಂಚರಾಗುವಂತೆ ಕೋರಿಕೊಳ್ಳಲಾಗಿ ನಂತರ ಅದೇ ಗ್ರಾಮದ ಕುಶಾಲಪ್ಪ ಅವರನ್ನು ಪರಿಚಯಿಸಿಕೊಂಡು ನಾವು ಬಂದ ವಿಷಯವನ್ನು ತಿಳಿಸಿ ಪಂಚರಾಗುವಂತೆ ಕೇಳಿಕೊಂಡ ಮೇರೆಗೆ ಹಾಗೂ ಅವರ ಮನೆಯನ್ನು ತೋರಿಸಲು ಕೇಳಲಾಗಿ ಮನೆಯನ್ನು ತೋರಿಸಿಕೊಟ್ಟಿರುತ್ತಾರೆ. ಪಂಚರಾಗಲು ನಿರಾಕರಿಸಿರುತ್ತಾರೆ. ನಂತರ ಅವರ ಮನೆಗೆ ಹೋಗಿ ಬಾಗಿಲನು ತಟ್ಟಿದಾಗ ಅವರು ಮನೆಯಿಂದ ಆಚೆಗೆ ಬಂದು ಅವರ ಹೆಸರು ಮಾದಪ್ಪ ಎಂದು

ತಿಳಿಸಿರುತ್ತಾರೆ. ನಂತರ ಅವರಿಗೆ ನಾವು ಬಂದ ವಿಚಾರವನ್ನು ತಿಳಿಸಿ ಸಾಕ್ಷಿ ಆಧಾರಗಳು ನಾಶವಾಗಿರುವುದರಿಂದ ಸ್ಥಳದಲ್ಲಿ ಶೋಧನಾ ವಾರೆಂಟನ್ನು ತಯಾರಿಸಿಕೊಂಡು ಪರಸ್ಪರ ಅಂಗಶೋಧನೆ ಮಾಡಿಕೊಂಡು ಕೆಂಪು ಮತ್ತು ಬಿಳಿ ಬಣ್ಣ ಇರುವ ಮನೆಯನ್ನು ಶೋಧನೆ ಮಾಡಲು 6 ಕೋಣೆಗಳನ್ನು ಶೋಧಿಸಿದಾಗ ಯಾವುದೇ ಅಕ್ರಮಗಳು ಕಂಡುಬಂದಿರುವುದಿಲ್ಲ. ನಂತರ ಮನೆಯ ಮುಂಭಾಗದ ಪೂರ್ವ ದಿಕ್ಕಿನಲ್ಲಿರುವ ದನದ ಕೊಟ್ಟಿಗೆಯನ್ನು ಶೋಧನೆ ಮಾಡಲಾಗಿ ಕೊಟ್ಟಿಗೆಯ ಹಿಂಭಾಗದಲ್ಲಿ ಬಟ್ಟೆಗಳಿಂದ ಮುಚ್ಚಿರುವ ಆ ಬಟ್ಟೆಗಳನ್ನು ತೆರೆದು ನೋಡಿದಾಗ 40 ಲೀ ಸಾಮರ್ಥ್ಯದ ನೀಲಿ ಬಣ್ಣದ ಪ್ಲಾಸ್ಟಿಕ್ ಡ್ರಂ ನಲ್ಲಿ ಅಂದಾಜು 30 ಲೀ ಸಾಮರ್ಥ್ಯದ ಬೆಲ್ಲದ ಪುಳಗಂಜಿಯು ದೊರೆತಿರುತ್ತದೆ. ಪಕ್ಕದಲ್ಲಿಯೇ ಕಳ್ಳಬಟ್ಟಿ ತಯಾರಿಸುವ ಪರಿಕರಗಳು ದೊರೆತಿರುತ್ತದೆ. 50 ಲೀ ಸಾಮರ್ಥ್ಯದ ಅಲ್ಯುಮಿನಿಯಂ ಅಂಡೆ ದೊರೆತಿರುತ್ತದೆ. 15 ಲೀ ಸಾಮರ್ಥ್ಯದ ಅಲ್ಯುಮಿನಿಯಂ ಪಾತ್ರೆ, 10 ಲೀ ಸಾಮರ್ಥದ ತಳಭಾಗದಲ್ಲಿ ರಂಧ್ರವಿರುವ ಅಲ್ಯುಮಿನಿಯಂ ಬಕೆಟ್ ಇವುಗಳು ದೊರೆತಿರುತ್ತದೆ. 30 ಲೀ ಬೆಲ್ಲದ ಪುಳಗಂಜಿಯಲ್ಲಿ ರಾಸಾಯನಿಕ ಪರೀಕ್ಷೆಗೆ 180 ಎಮ್ ಎಲ್ ಗಾಜಿನ ಬಾಟಲಿ ಯಲ್ಲಿ ಪುಳಗಂಜಿಯನ್ನು ತೆಗೆದು ಬಿಳಿ ಬಣ್ಣದ ಬಟ್ಟೆಯನ್ನು ಸುತ್ತಿ ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಪರಿಕರಗಳನ್ನು ಮತ್ತು ಡ್ರಂ ಗಳಿಗೆ ಮಾದರಿ ಚೀಟಿಯನ್ನು ಅಂಟಿಸಲಾಗಿರುತ್ತದೆ. ನಂತರ ವಿಷಯವನ್ನು ಮೇಲಾಧಿಕಾರಿಗಳಿಗೆ ತಿಳಿಸಿ ಬೆಲ್ಲದ ಪುಳಗಂಜಿ ಗಾಟು ವಾಸನೆ ಬಂದಿರುವುದರಿಂದ ಮೇಲಾಧಿಕಾರಿಗಳ ಅನುಮತಿ ಪಡೆದು ಸ್ಥಳದಲ್ಲಿ ಉಳಿದ ಪುಳಗಂಜಿಯನ್ನು ನಾಶಪಡಿಸಿರುತ್ತೇವೆ. ನಂತರ ಸ್ಥಳದಲ್ಲಿಯೇ ಮಹಜರನ್ನ 7.30-8.45 ಗಂಟೆಯವರೆಗೆ ಮಾಡಿರುತ್ತೇವೆ. ನಂತರ ಮೊಬೈಲ್ ನಿಂದ ವಿದ್ಯಾಮಾನವನ್ನು ಸೆರೆಹಿಡಿಯಲಾಯಿತು. ನಂತರ ಆರೋಪಿಯನ್ನು ವಶಕ್ಕೆ ಪಡೆದು ಮತ್ತು ಪರಿಕರಗಳನ್ನು ವಶಕ್ಕೆ ಪಡೆದು ಕಚೇರಿಗೆ ಬಂದಿರುತ್ತೇವೆ. ದಿಃ 14.02.2025 ರಂದು ಮಾದರಿಗೆ ತೆಗೆದ ಬೆಲ್ಲದ ಪುಳಗಂಜಿಯನ್ನು ಬೆಂಗಳೂರು ರಾಸಾಯನಿಕ ಪ್ರಯೋಗಾಲಯಕ್ಕೆ ಕಳುಹಿಸಲಾಯಿುತು. ದಿಃ 11.04.2025 ರಂದು ಕಚೇರಿಗೆ ಬಂದು ವರದಿಯನ್ನು ಒಪ್ಪಿಸಿರುತ್ತೇನೆ.

ದೂರನ್ನು ಈಗಾಗಲೇ ನಿಪಿ 1 ಸಾಕ್ಷಿಯ ಸಹಿಯನ್ನು ನಿಪಿ-1(ಬಿ), .ಮಹಜರನ್ನು ಈಗಾಗಲೇ ನಿಪಿ 4, ಸಾಕ್ಷಿಯ ಸಹಿಯನ್ನು ನಿಪಿ-4(ಬಿ), ಕಳ್ಳಬಟ್ಟಿ ದಾಳಿ ಸವುಯದಲ್ಲಿ ಜಪ್ತಿ ಮಾಡಿದ ಆರ್ ಟಿ ಕಲ್ಸ್ ಈಗಾಗಲೇ ನಿಪಿ 5, ಸಾಕ್ಷಿಯ ಸಹಿಯನ್ನು ನಿಪಿ-5(ಬಿ), ಶೋಧನಾ ಸಮಚ್ಚಿತ ವರದಿಯನ್ನು ಈಗಾಗಲೇ ನಿಪಿ 3, ಸಾಕ್ಷಿಯ ಸಹಿಯನ್ನು ನಿಪಿ-3(ಬಿ), ಮಾದರಿ ಮೊಹರು ಈಗಾಗಲೆ ನಿಪಿ 6 ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ,

ಫೋಟೋಗಳನ್ನು ಈಗಾಗಲೇ ನಿಪಿ 7 ಮತ್ತು 8, ರಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಿರುವಂತಹ ವರದಿಯನ್ನು ನಿಪಿ 11, ಸಾಕ್ಷಿಯ ಸಹಿಯನ್ನು 11(ಎ) ಎಂದು ಮತ್ತು ಕಚೇರಿಗೆ ವರದಿ ಒಪ್ಪಿಸಿರುವ ಬಗ್ಗೆ ನಿಪಿ 12 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 12(ಎ) ಎಂದು ಗುರುತಿಸಲಾಯಿುತು. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಮತ್ತು ಮುದ್ದೆಮಾಲು 1 ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಶ್ರೀ.ಹೆಚ್ ಕೆ ಪಿ ವಕೀಲರಿಂದ:</u>

ಎರಡು ಸರ್ಕಾರಿ ವಾಹನ ಹಾಗು ಒಂದು ಖಾಸಗಿ ವಾಹನದಲ್ಲಿ ಘಟನಾ ಸ್ಥಳಕ್ಕ ಹೋಗಿರುತ್ತೇವೆ. ನಮ್ಮ ಕಚೇರಿಯಲ್ಲಿ ಲಾಗ್ ಪುಸ್ತಕ ಇರುತ್ತದೆ. ಸದರಿ ಪುಸ್ತಕದಲ್ಲಿ ಸರ್ಕಾರಿ ವಾಹನದ ಬಗ್ಗೆ ನಮೂದು ಮಾಡಿರುತ್ತೇವೆ. ಖಾಸಗಿ ವಾಹನವು ಇಲಾಖೆಯ ಸಿಬ್ಬಂದಿಗೆ ಸೇರಿರುತ್ತದೆ ಅದನ್ನು ಮಹಜರಿನಲ್ಲಿ ಹೇಳಿರುವುದಿಲ್ಲ. ನಾವು ಎಲ್ಲಿ ದಾಳಿ ಮಾಡಿರುತ್ತೇವೆ ಎಂಬುದರ ಬಗ್ಗೆ ನಮ್ಮ ಚಲನಾ ವಲನ ಪುಸ್ತಕದಲ್ಲಿ ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮಾದರಿ ಮೊಹರನ್ನು ಸ್ಥಳದಲ್ಲೇ ಮಾಡುತ್ತೇವೆ ಸದರಿ ಮಾದರಿ ಮೊಹರಲ್ಲಿ ಕ್ರೈಂ ನಂಬರ್ ನಮೂದು ಮಾಡುತ್ತೇವೆ ಎಂದರೆ ಸರಿ. ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ. ಆರೋಪಿಯ ಮನೆಯ ಪಕ್ಕದಲ್ಲಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಸ್ಥಳೀಯರನ್ನು ಮಹಜರ ಸಾಕ್ಷಿದಾರರಾಗಿ ಕರೆದಿರುತ್ತೇವೆ ಆದರೆ ಯಾರೂ ಬಂದಿರುವುದಿಲ್ಲ. ಸದರಿ ವಿಷಯವನ್ನು ಮಹಜರಿನಲ್ಲಿ ಹೇಳಿರುತ್ತೇವೆ. ನಾನು ದಾಳಿಗೆ ಹೋದಂತಹ ಊರು ದೊಡ್ಡ ತೋಳೂರು. ನಾನು ಹಾಜರುಪಡಿಸಿರುವಂತಹ ಫೋಟೋದಲ್ಲಿ ಚಿಕ್ಕತೋಳೂರು ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಾವು ಅಮಾನತು ಪಡಿಸಿಕೊಂಡಂತಹ ಪರಿಕರಗಳ ಮೇಲೆ ಮಾದರಿ ಚೀಟಿಯನ್ನು ಅಂಟಿಸಿರುತ್ತೇವೆ. ಫೋಟೋದಲ್ಲಿ ಯಾವುದೇ ಮಾದರಿಯ ಚೀಟಿ ಇರುವುದಿಲ್ಲ ಎಂದರೆ ಸರಿ. ಆರೋಪಿಯು ಮಾರಾಟ ಮಾಡಿರುವ ಬಗ್ಗೆ ಯಾವುದೇ ರೀತಿ ನಾವು ವಿಚಾರಣೆ ಮಾಡಿರುವುದಿಲ್ಲ. ಬಟ್ಟೆ ಮುಚ್ಚಿರುವ ಬಗ್ಗೆ ಮಹಜರಲ್ಲಿ ನಮೂದು ಮಾಡಿರುವುದಿಲ್ಲ. ಆ ಬಟ್ಟೆಗಳನ್ನು ಸಹ ನಾವು ಅಮಾನತು ಪಡಿಸಿಕೊಂಡಿರುವುದಿಲ್ಲ. ನಾನು ಸ್ಥಳಕ್ಕ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರನ್ನು ಠಾಣೆಯಲ್ಲಿ ಮಾಡಿರುತ್ತೇವೆ ಎಂದರೆ ಸರಿಯಲ್ಲ ಹಾಗೂ ಆರೋಪಿಯಿಂದ ಪರಿಕರಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ನನಗೆ ಬಂದ ಮಾಹಿತಿಯ ಬಗ್ಗೆ ನಮೂದು ಮಾಡಿರುವುದಿಲ್ಲ. ನಾನು ಎಫ್ ಎಸ್ ಎಲ್ ರಸಾಯನಿಕ ಪರೀಕ್ಷೆಗೆ

ಯಾವುದೇ ಮಾದರಿ ತೆಗೆದ ಮುದ್ದೆ  ಮಾಲನ್ನು ಕಳಹಿಸಿರುವುದಿಲ್ಲ ಎಂದರೆ ಸರಿಯಲ್ಲ ಹಾಗೂ ವರದಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ

ಸೋಮವಾರಪೇಟೆ